# MAYA CARE FOUNDATION


## ವರದಿ ಪತ್ರಿಕೆ

Year: 2nd Issue: 2nd
ಜನವರಿ- ಮಾರ್ಚ್ 2026

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ


## ಸಂಪಾದಕೀಯ

ಇತ್ತೀಚಿನ ದಿನಗಳಲ್ಲಿ ಅಂಗವಿಕಲರಿಗೆ ತೊಂದರೆ ಆಗಬಾರದೆಂದು ಕರ್ನಾಟಕ ಸರ್ಕಾರವು ಹಲವು ಸೌಲಭ್ಯಗಳನ್ನು ಜಾರಿಗೊಳಿಸಿದೆ. ಶೇ. 40–74 ಅಂಗವೈಕಲ್ಯ ಹೊಂದಿರುವವರಿಗೆ ತಿಂಗಳಿಗೆ ₹800–₹1,200 ಮಾಸಾಶನ ನೀಡಲಾಗುತ್ತಿದೆ. KSRTC ಮತ್ತು BMTC ಬಸ್‌ಗಳಲ್ಲಿ ಉಚಿತ/ರಿಯಾಯಿತಿ ಪಾಸ್, ತ್ರಿಚಕ್ರ ವಾಹನ, ಬ್ಯಾಟರಿ ವೀಲ್‌ಚೇರ್, ಶ್ರವಣ ಹಾಗೂ ದೃಷ್ಟಿ ಸಾಧನಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ವಿಕಲಚೇತನ ಮಹಿಳೆಯರಿಗೆ ಸ್ವಯಂ ಉದ್ಯೋಗಕ್ಕಾಗಿ ಸಾಲ ಸೌಲಭ್ಯವಿದೆ. 2025–26ರಲ್ಲಿ ಆರೈಕೆದಾರರಿಗೆ ₹1,000 ಭತ್ಯೆ, ಸ್ವಂತ ಉದ್ಯೋಗಕ್ಕೆ ₹3 ಲಕ್ಷ ಸಹಾಯಧನ, ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ UDID ಕಾರ್ಡ್ ಹೊಂದಿರುವವರಿಗೆ ಚಿಕಿತ್ಸೆ ಸೌಲಭ್ಯ ವಿಸ್ತರಿಸಲಾಗಿದೆ. ಹೊಸ ಮಸೂದೆಯಲ್ಲಿ ಖಾಸಗಿ ಕಂಪನಿಗಳಲ್ಲಿ ಶೇ. 5 ಉದ್ಯೋಗ ಮೀಸಲಾತಿ, ಉನ್ನತ ಶಿಕ್ಷಣದಲ್ಲಿ ಶೇ. 10 ಸೀಟು ಮೀಸಲಾತಿ ಹಾಗೂ 5 ವರ್ಷ ವಯೋಮಿತಿ ಸಡಿಲಿಕೆ ಪ್ರಸ್ತಾಪಿಸಲಾಗಿದೆ. ಈ ಸೌಲಭ್ಯಗಳಿಗೆ UDID ಕಾರ್ಡ್, ಆಧಾರ್, ಆದಾಯ/ಜಾತಿ ಪ್ರಮಾಣ ಪತ್ರ ಮತ್ತು ಬ್ಯಾಂಕ್ ಪಾಸ್‌ಬುಕ್ ಅಗತ್ಯ

.ಭಾರತೀಯ ಮಹಿಳಾ ಅಂಧರ ಕ್ರಿಕೆಟ್ ತಂಡವು ಇತ್ತೀಚೆಗೆ IBSA ವಿಶ್ವ ಅಂಧರ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದು ದೇಶದ ಹೆಮ್ಮೆ ಹೆಚ್ಚಿಸಿದೆ. ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಫೈನಲ್‌ನಲ್ಲಿ ಆಸ್ಟ್ರೇಲಿಯಾವನ್ನು 114 ರನ್‌ಗಳಿಗೆ ಕಟ್ಟಿಹಾಕಿ, ಮಳೆಯ ನಡುವೆಯೂ ಧೈರ್ಯ ಕಳೆದುಕೊಳ್ಳದೆ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದರು. ದೃಷ್ಟಿ ದೌರ್ಬಲ್ಯವಿದ್ದರೂ ಚೆಂಡಿನ ಶಬ್ದವನ್ನು ಆಧರಿಸಿ ನಿಖರವಾಗಿ ಆಟವಾಡಿದ ಇವರ ಪ್ರತಿಭೆ ಅಸಾಧಾರಣ. ಬಡತನ ಮತ್ತು ಸವಾಲುಗಳನ್ನು ಎದುರಿಸಿ ಬಂದ ಈ ಆಟಗಾರ್ತಿಯರ ವಿಶ್ವಾಸವೇ ಅವರನ್ನು ಅಗ್ರಸ್ಥಾನಕ್ಕೆ ತಂದು ನಿಲ್ಲಿಸಿದೆ. ಅವರ ಸಾಧನೆ ದೈಹಿಕ ಸವಾಲುಗಳನ್ನು ಎದುರಿಸುತ್ತಿರುವ ಅನೇಕರಿಗೆ ಪ್ರೇರಣೆಯಾಗಿದೆ. “ಸಾಧನೆಗೆ ಅಂಗವೈಕಲ್ಯ ಅಡ್ಡಿಯಲ್ಲ” ಎಂಬುದಕ್ಕೆ ಈ ತಂಡವೇ ಜೀವಂತ ಉದಾಹರಣೆ.

ಸಮಾಜದಲ್ಲಿ ಅಂಗವಿಕಲರನ್ನು ನೋಡಿದಾಗ ಕರುಣೆ ಮೂಡುವುದಾದರೂ, ಅದು ಅವರ ಜೀವನವನ್ನು ಸುಧಾರಿಸುವುದಿಲ್ಲ. ಅವರಿಗೆ ಬೇಕಿರುವುದು ಸಮಾನ ಅವಕಾಶಗಳು ಮತ್ತು ಸೌಲಭ್ಯಗಳ ಸರಿಯಾದ ಅನುಷ್ಠಾನ. ಶಿಕ್ಷಣ, ಉದ್ಯೋಗ, ಸಾರಿಗೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಪೂರಕ ವ್ಯವಸ್ಥೆಗಳು ಜಾರಿಯಾದಾಗ ಮಾತ್ರ ಅವರು ಸ್ವತಂತ್ರವಾಗಿ ಬದುಕಬಹುದು. ಸಬಲೀಕರಣವೇ ನಿಜವಾದ ಗೌರವ, ಸಮಾಜವು ಅವರನ್ನು ಸಾಧಕರಾಗಿ ನೋಡಬೇಕು, ಕರುಣೆಯ ವಸ್ತುವಾಗಿ ಅಲ್ಲ. ಸರ್ಕಾರವು ಹಲವಾರು ಯೋಜನೆಗಳ ಮೂಲಕ ಅಂಗವಿಕಲರಿಗೆ ಸಹಾಯ ಒದಗಿಸುತ್ತಿದೆ. ಇದೇ ದಾರಿಯಲ್ಲಿ ಮಾಯಾ ಕೇರ್ ಫೌಂಡೇಶನ್ ಅಂಗವಿಕಲರಿಗೆ ಮನೆಯಲ್ಲೇ ಕೆಲಸ ಮಾಡುವ ಅವಕಾಶ ನೀಡಿ, ಅಗತ್ಯ ತರಬೇತಿಗಳನ್ನು ಉಚಿತವಾಗಿ ನೀಡುತ್ತಾ ಉದ್ಯೋಗ ಅವಕಾಶಗಳನ್ನು ಕಲ್ಪಿಸಿ, ಅವರ ಕಾಲಿನ ಮೇಲೆ ನಿಂತುಕೊಳ್ಳಲು ಬೆಂಬಲ ನೀಡುತ್ತಿದೆ. ಜೊತೆಗೆ ಹಿರಿಯ ನಾಗರಿಕರಿಗೆ ಉಚಿತ ಸೇವೆಗಳನ್ನು ಒದಗಿಸುತ್ತಿದೆ. ಇದರ ಪ್ರತಿಫಲವಾಗಿ, ಮಾಯಾ ಕೇರ್ ಫೌಂಡೇಶನ್‌ನ ‘ಪ್ರಾಜೆಕ್ಟ್ ಬಿಂದು’ಗೆ ಇನ್ಫೋಸಿಸ್ ಫೌಂಡೇಶನ್‌ನಿಂದ ಶಿಕ್ಷಣ ವಿಭಾಗದಲ್ಲಿ ‘ಆರೋಹಣ ಸಾಮಾಜಿಕ ಆವಿಷ್ಕಾರ ಪ್ರಶಸ್ತಿ 2025’ ಲಭಿಸಿದೆ. ಈ ಗೌರವವು ಮಾಯಾ ಕೇರ್‌ನ ಒಳಗೊಳ್ಳುವ ನಾಯಕತ್ವ, ಸಾಮಾಜಿಕ ನವೀನತೆ ಮತ್ತು ಸಮುದಾಯ ಆಧಾರಿತ ಸೇವೆಯ ಬದ್ಧತೆಯನ್ನು ಎತ್ತಿ ತೋರಿಸುತ್ತದೆ

ಮಾಯಾ ಕೇರ್ ಫೌಂಡೇಶನ್ ವತಿಯಿಂದ ಎಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು. 2026ರಲ್ಲಿ ನಿಮ್ಮ ಜೀವನದಲ್ಲಿ ಭರವಸೆ, ಸಂತೋಷ ಮತ್ತು ಶಾಂತಿ ತುಂಬಿರಲಿ. ವಿಶೇಷ ಚೇತನರ ಹಾಗೂ ಹಿರಿಯರ ಸ್ವಾವಲಂಬನೆಗಾಗಿ ನಮ್ಮ ಪಯಣಕ್ಕೆ ನಿಮ್ಮ ಸಹಕಾರ ಮುಂದುವರಿಯಲಿ.

# ಫಲಾನುಭವಿಗಳಿಂದ ಪ್ರತಿಕ್ರಿಯೆ

## ಮಾನಸ ಮಂದಿರ ವೃದ್ಧಾಶ್ರಮ , ಬೆಂಗಳೂರು (+91 9620307235)



ಮಾನಸ ಮಂದಿರದ ಪರವಾಗಿ, ಮಾಯಾ ಕೇರ್ ಫೌಂಡೇಶನ್ ಮತ್ತು CGI ನಡೆಸಿದ ಸಂಗೀತ ಕಾರ್ಯಕ್ರಮಕ್ಕೆ ಹೃತ್ಪೂರ್ವಕ ಧನ್ಯವಾದಗಳು. ಈ ಕಾರ್ಯಕ್ರಮದಿಂದ ಹಿರಿಯರು ಸಂತೋಷಗೊಂಡು, ಆತ್ಮವಿಶ್ವಾಸ ಮತ್ತು ಆರೈಕೆಯ ಅನುಭವ ಪಡೆದಿದ್ದಾರೆ. ಮತ್ತೊಮ್ಮೆ ಧನ್ಯವಾದಗಳು.

## ಗಾಂಧಿ ವೃದ್ಧಾಶ್ರಮ ಬೆಂಗಳೂರು ( +91 9243123730)



ನಮ್ಮ ಗಾಂಧಿ ವೃದ್ಧಾಶ್ರಮದಲ್ಲಿ ಚಳಿಗಾಲದ ಕಿಟ್‌ಗಳ ವಿತರಣೆಯ ಮೂಲಕ ಹಿರಿಯ ನಾಗರಿಕರಿಗೆ ಆರೈಕೆ ಮತ್ತು ಆತ್ಮವಿಶ್ವಾಸ ನೀಡಿದ ಸೇವಾ ಕಾರ್ಯಕ್ಕೆ ಹೃತ್ಪೂರ್ವಕ ಧನ್ಯವಾದಗಳು. ಈ ಕಾರ್ಯದಲ್ಲಿ ತಮ್ಮ ಸಮಯ ಮತ್ತು ಶ್ರಮವನ್ನು ನೀಡಿದ ಮಾಯಾ ಕೇರ್ ಫೌಂಡೇಶನ್ ನ ಸ್ವಯಂಸೇವಕರಾದ ಸವಿತಾ ಮತ್ತು ತೀರ್ಥ ರಾಮೇಶ್ವರ . ಸರ್ ಅವರಿಗೆ ವಿಶೇಷ ಅಭಿನಂದನೆಗಳು.

## ಸಾಯಿ ಶಂಕರ ಶಾಂತಿ ಕೇಂದ್ರಂ ವೃದ್ಧಾಶ್ರಮ, ಕೊಚ್ಚಿ , ಕೇರಳ (+ 9895144319)



ನಮ್ಮ ಆಶ್ರಮಕ್ಕೆ ಮಾಯಾ ಕೇರ್ ಮೂಲಕ ಬಂದ ಅಲೀನಾ ಮ್ಯಾಡಮ್ ಅವರ ಸೇವೆಗೆ ಹೃತ್ಪೂರ್ವಕ ಧನ್ಯವಾದಗಳು. ಅವರು ನಿವಾಸಿಗಳೊಂದಿಗೆ ಸಮಯ ಕಳೆಯುತ್ತ ಪ್ರೀತಿ, ಸಹನೆ ಮತ್ತು ಗೌರವ ತೋರಿದರು. ಅವರ ಭೇಟಿಯಿಂದ ಎಲ್ಲರೂ ಸಂತೋಷಗೊಂಡು, ಮನಸ್ಸಿಗೆ ಶಾಂತಿ ದೊರೆಯಿತು. ಅವರ ಸೇವಾ ಮನೋಭಾವಕ್ಕೆ ನಾವು ಕೃತಜ್ಞರಾಗಿದ್ದು, ಇಂತಹ ಸೇವೆಗಳು ಮುಂದುವರಿಯಲೆಂದು ಹಾರೈಸುತ್ತೇವೆ

## ಜಾಯ್ ಫೌಂಡೇಶನ್, ಹೈದರಾಬಾದ್. (+91 9505116777)



ನಮ್ಮ ವೃದ್ಧಾಶ್ರಮದಲ್ಲಿ 'ಹಿರಿಯರೊಂದಿಗೆ ಕಲಾ ಕಾರ್ಯಕ್ರಮ' ನಡೆಸಿದಕ್ಕಾಗಿ ನಿಮಗೂ ನಿಮ್ಮ ತಂಡಕ್ಕೂ ಹೃತ್ಪೂರ್ವಕ ಧನ್ಯವಾದಗಳು. ಕಾರ್ಯಕ್ರಮವು ಉತ್ತಮವಾಗಿ ಯೋಜನೆಗೊಂಡಿದ್ದು, ನಿವಾಸಿಗಳು ಸಂತೋಷದಿಂದ ಭಾಗವಹಿಸಿದರು. ನಿಮ್ಮ ಆತ್ಮೀಯತೆ ಮತ್ತು ಗೌರವದಿಂದ ಅವರು ಮೌಲ್ಯಯುತವಾಗಿ ಭಾವಿಸಿದರು. ಇಂತಹ ಕಾರ್ಯಕ್ರಮಗಳು ಅವರಿಗೆ ಸಂತೋಷ ಮತ್ತು ಆತ್ಮವಿಶ್ವಾಸ ನೀಡುತ್ತವೆ. ನಿಮ್ಮ ಶ್ರಮಕ್ಕೆ ನಾವು ಕೃತಜ್ಞರಾಗಿದ್ದು, ಮುಂದಿನ ಸಹಕಾರಕ್ಕಾಗಿ ಎದುರು ನೋಡುತ್ತಿದ್ದೇವೆ

## ಸಂಧ್ಯಾ ಅತ್ರಮ್ ಅವರ ಪಯಣ (ಬಿಂದು ತಂಡದ ಸದಸ್ಯ)



ಮಹಾರಾಷ್ಟ್ರದ ಚಂದ್ರಪುರದಲ್ಲಿ ಜನಿಸಿದ ಸಂಧ್ಯಾ ಅತ್ರಮ್ ಬಾಲ್ಯದಿಂದಲೇ ಅಸಾಧಾರಣ ಧೈರ್ಯವನ್ನು ತೋರಿದರು. ಅಸ್ಥಿ ಬೆಳವಣಿಗೆ ಸಮಸ್ಯೆಯಿಂದ ಅನೇಕ ಶಸ್ತ್ರಚಿಕಿತ್ಸೆಗಳನ್ನು ಎದುರಿಸಿದರೂ, ಅವರು ಶಿಕ್ಷಣವನ್ನು ಪೂರ್ಣಗೊಳಿಸಿ ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು.ಉದ್ಯೋಗ ಕ್ಷೇತ್ರದಲ್ಲಿ ನಿರಾಕರಣೆ ಎದುರಿಸಿದರೂ, ಇಂಟೀರಿಯರ್ ಡಿಸೈನ್‌ನಲ್ಲಿ ತರಬೇತಿ ಪಡೆದು ದೇವಾಲಯ ವಿನ್ಯಾಸ ಮಾಡಿ ಗೌರವ ಗಳಿಸಿದರು. ನಂತರ ಮಾಯಾ ಕೇರ್ ಸಂಸ್ಥೆಯೊಂದಿಗೆ ಸೇರಿ ಹೊಸ ಜೀವನ ಅಧ್ಯಾಯ ಆರಂಭಿಸಿದರು. ಕೊರೋನಾ ಲಾಕ್‌ಡೌನ್ ಸಮಯದಲ್ಲಿ ಅವರು ಹಿರಿಯರು ಮತ್ತು ಅಂಗವಿಕಲರಿಗೆ ಲಸಿಕೆ ಯೋಜನೆಗೆ ನೇತೃತ್ವ ನೀಡಿ, 18 ನಗರಗಳಲ್ಲಿ 1200ಕ್ಕೂ ಹೆಚ್ಚು ಜನರಿಗೆ ಲಸಿಕೆ ಒದಗಿಸಿದರು. ಈ ಸಮಯದಲ್ಲಿ ತಂದೆಯ ಅಪಘಾತದ ದುಃಖವನ್ನು ಎದುರಿಸಿದರೂ, ಅವರ ನಂಬಿಕೆಯನ್ನು ಗೌರವಿಸಿ ಕೆಲಸ ಮುಂದುವರಿಸಿದರು. ಮಾಯಾ ಕೇರ್ ಸಂಸ್ಥಾಪಕಿ ಮಂಜಿರಿ ಗೋಖಲೆ ಜೋಶಿ ಅವರು ಸಂಧ್ಯಾ ಅವರ ಪ್ರತಿಭೆಯನ್ನು ಗುರುತಿಸಿ, ಭದ್ರವಾದ ಪೂರ್ಣಕಾಲಿಕ ಸ್ಥಾನ ನೀಡಿದರು. ನಂತರ ಸಂಧ್ಯಾ BPO ಯೋಜನೆಗೆ ನೇತೃತ್ವ ನೀಡಿ, Persistent, ICICI, WayCool, Anarde Foundation, ISS Facilities ಸೇರಿದಂತೆ ಆರು ಗ್ರಾಹಕರನ್ನು ನಿರ್ವಹಿಸಿದರು. ಇಂದು ಸಂಧ್ಯಾ 50 ಸದಸ್ಯರ ತಂಡವನ್ನು ಮುನ್ನಡೆಸುತ್ತಿದ್ದು, 1000 ಅಂಗವಿಕಲರನ್ನು ಸೇರಿಸಿ ಕನಿಷ್ಠ 15 ಗ್ರಾಹಕರನ್ನು ಪಡೆಯುವ ಕನಸು ಕಾಣುತ್ತಿದ್ದಾರೆ.




ಮಾಯಾ ಕೇರ್ ಫೌಂಡೇಶನ್‌ಗೆ ಇನ್ಫೋಸಿಸ್ ಫೌಂಡೇಶನ್ ನೀಡಿದ 2025ರ ಆರೋಹಣ ಪ್ರಶಸ್ತಿ (ಶಿಕ್ಷಣ ವಿಭಾಗ – ಸಾಮಾಜಿಕ ನವೀನತೆ) ಲಭಿಸಿದೆ. ಪ್ರಶಸ್ತಿಯನ್ನು ಪ್ರತಿನಿಧಿಗಳಾದ ಸೋಮ್ಯಾ ಮತ್ತು ಪಲ್ಲವಿ ಸ್ವೀಕರಿಸಿದರು.



ಪಲ್ಲವಿ ಜಿ. ಕುಲಕರ್ಣಿ ಅವರು ವೃತ್ತಿಪರ ಸಾಧನೆಗಾಗಿ ರೋಟರಿ ಅಬಿಲಿಟೀಸ್ ಬೆಂಗಳೂರು 2025 ನೀಡಿದ 'ಅನ್ಸಂಗ್ ಹೀರೋ' ಪ್ರಶಸ್ತಿಯನ್ನು ಪಡೆದಿದ್ದಾರೆ



ನಮ್ಮ ಹಿರಿಯ ನಾಯಕತ್ವ ತಂಡದ ಸದಸ್ಯೆ ಶ್ರೀಮತಿ ಜ್ಯೋತಿ ಮೋರೆ ಅವರು, 'ಭಾರತದಲ್ಲಿ ಹಿರಿಯರ ಆರೈಕೆ' ವಿಷಯದ ಮೇಲೆ ಪುಣೆಯ JW Marriott ಹೋಟೆಲ್‌ನಲ್ಲಿ ನಡೆದ ಜರ್ಮನ್ ಸರ್ಕಾರದ ಉನ್ನತ ಮಟ್ಟದ ಪ್ರತಿನಿಧಿ ಸಭೆಯಲ್ಲಿ ಪ್ರಾಜೆಕ್ಟ್ ಬಿಂದು ಪರವಾಗಿ ಭಾಗವಹಿಸಿದರು




ಸವಿತಾ ಸುಬೇದಾರ್ ಅವರು NCSI ಸಮ್ಮೇಳನದಲ್ಲಿ ಭಾಗವಹಿಸಿ, ವೃತ್ತಿಪರ ಶ್ರೇಷ್ಠತೆಯನ್ನು ಪ್ರತಿಬಿಂಬಿಸುವ ಟಾಪ್ 6 ಫೈನಲಿಸ್ಟ್ ಆಗಿ ಗುರುತಿಸಲ್ಪಟ್ಟರು.



ಬಿಂದು ತಂಡದ ಪ್ರೀತಮ್ ಅವರು ಸಾಮಾಜಿಕ ಕಾರಣಗಳು ಮತ್ತು ಸಮುದಾಯದ ತೊಡಗಿಸಿಕೊಳ್ಳುವಿಕೆಯನ್ನು ಉತ್ತೇಜಿಸಲು ಮ್ಯಾರಥಾನ್‌ನಲ್ಲಿ ಸಕ್ರಿಯವಾಗಿ ಭಾಗವಹಿಸಿದರು



ಮಾಯಾ ಕೇರ್ ಸಂಸ್ಥೆ ಬೆಂಗಳೂರಿನ ಅಕ್ಷತಾ ವೃದ್ಧಾಶ್ರಮದಲ್ಲಿ ಆರೋಗ್ಯ ಶಿಬಿರವನ್ನು ಆಯೋಜಿಸಿತು. ಈ ಕಾರ್ಯಕ್ರಮದಲ್ಲಿ ಸ್ವಯಂಸೇವಕರಾದ ಸಾವಿತಾ ಮತ್ತು ತೀರ್ಥ ರಾಮೇಶ್ವರರು ಭಾಗವಹಿಸಿದರು

Year: 2nd Issue: 2nd
ಜನವರಿ- ಮಾರ್ಚ್ 2026

The next best thing to family

# MAYA CARE FOUNDATION

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

## ಮಾಯಾ ಕೇರ್ ರಾಷ್ಟ್ರೀಯ ಸಹಾಯವಾಣಿ: 1800 572 1343

| | |
|---|---|
| ಮಾಯಾ ಕೇರ್ ಭಾರತದ **72** ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. | **FOR WHATSAPP** |
| ದಕ್ಷಿಣ ಭಾರತದಲ್ಲಿ ಕೊಯಮತ್ತೂರು, ಚೆನ್ನೈ, ಪಾಂಡಿಚೇರಿ, ಹೈದರಾಬಾದ್, ಬೆಂಗಳೂರು, ಇದನ್ನು ಒಳಗೊಂಡಂತೆ ಭಾರತದ 72 ನಗರಗಳಲ್ಲಿ ಮತ್ತು ಯು. ಕೆ ಯ 4 ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ | **9552510400/9552510411**<br>**8055995966** |

ಕೆಳಗೆ ನೀಡಿರುವ ಹಿರಿಯ ನಾಗರಿಕರ ಉಚಿತ ಸೇವೆಗಳನ್ನು ವಿಶೇಷ ಚೇತನ ವೃತ್ತಿಪರರಿಂದ ಸಂಪೂರ್ಣವಾಗಿ ನಿರ್ವಹಿಸಲಾಗುತ್ತದೆ
1. ಹಿರಿಯ ನಾಗರಿಕರಿಗೆ ಅವರ ಮನೆಯ ಹತ್ತಿರ ವಾಕಿಂಗ್ ಮಾಡಲು ಸಹಾಯ ಮಾಡುವುದು,ಪತ್ರಿಕೆಗಳು,ಧಾರ್ಮಿಕ ಪುಸ್ತಕ ಗಳನ್ನು ಓದುವುದು. ಆಸ್ಪತ್ರೆಗೆ ಕರೆದುಕೊಂಡು ಹೋಗುವುದು, ವೈದ್ಯರನ್ನು ಭೇಟಿ ಮಾಡಿಸುವುದು, ಬ್ಯಾಂಕ್ ಕೆಲಸಗಳಿಗೆ ಸಹಾಯ ಮಾಡುವುದು, ಹಿರಿಯ ನಾಗರಿಕರನ್ನು ಬಸ್ /ರೈಲ್ವೆ /ವಿಮಾನ ನಿಲ್ದಾಣಗಳಿಗೆ ಕರೆದುಕೊಂಡು ಹೋಗವುದು, ಆಸ್ಪತ್ರೆಗೆ ದಾಖಲಾದ ಸಮಯದಲ್ಲಿ ICU ಹೊರಗೆ ರೋಗಿಯೊಂದಿಗೆ ಕುಳಿತುಕೊಳ್ಳುವುದು.ಬ್ಯಾಂಕ್‌ನಲ್ಲಿ ನಗದು/ಚೆಕ್‌ಗಳನ್ನು ಹಿಂಪಡೆಯಲು/ಠೇವಣಿ ಮಾಡಲು ಸಹಾಯ ಮಾಡುವುದು ಸ್ಮಾರ್ಟ್‌ಫೋನ್‌ಗಳ ಬಳಕೆ ಮತ್ತು ತಾಂತ್ರಿಕ ಸಹಾಯ ಮಾಡುವುದು

| | |
|---|---|
| **Website - www.mayacare.org** | **Email : service@mayacare.org** |

Merchant Name : **MAYA CARE FOUNDATION**
Mobile Number : **7721053535**

**Deduction under I-Tax Act is Available**

NAME OF THE A/C - MAYA CARE FOUNDATION

NAME OF THE BANK : ICICI BANK LIMITED (BRANCH : TILAK ROAD,PUNE)
ACCOUNT NO. : 187501000462
IFSC CODE : ICIC0001875

**UPI ID: mayacarefoundation@icici**

**Book-Post**

| **FROM:** | **TO:** |
|---|---|
| **MAYA CARE FOUNDATION**<br>1214 Shukrawar Peth, Africa House, Subhash Nagar, Lane no.04,Pune-411002 | **Shree / Shrimati**<br>__________<br>__________<br>__________ |